ದಂಪತಿ ರೇಡಿಯಂ ಮತ್ತು ಪೊಲೋನಿಯಮ್ ವಸ್ತುಗಳನ್ನು ಕಂಡುಹಿಡಿದರು. ಅವರಿಗೆ 1903ರ ಫಿಸಿಕ್ಸ್ ನೊಬೆಲ್ ಬಹುಮಾನವೂ ಲಭಿಸಿತು.

ನೊಬೆಲ್ ಬಹುಮಾನಕ್ಕೆ ಹೆಸರುಗಳನ್ನು ಸೂಚಿಸುವಾಗ ಫ್ರೆಂಚ್ ಪ್ರೊಫೆಸರುಗಳು ಕೇವಲ ಪಿಯೆರ್ ಕ್ಯೂರಿ ಮತ್ತು ಬೆಕೆರಲ್ ಹೆಸರನ್ನು ಮುಂದಿಟ್ಟು ಮೇರಿ ಹೆಸರನ್ನು ಬಿಟ್ಟಿದ್ದರು. 'ಅವಳು ಹೆಂಗಸು, ಅದೂ ಹೊರದೇಶದ ಹೆಂಗಸು. ಅವಳಿಗೇಕೆ ಬಹುಮಾನ?' ಎಂಬ ಧೋರಣೆ. ಬಹುಮಾನ ಇನ್ನೂ ಘೋಷಿತವಾಗಿರಲಿಲ್ಲ. ಆಗ ನೊಬೆಲ್ ಸಮಿತಿಯ ಸದಸ್ಯರೊಬ್ಬರು ಪಿಯೆರ್‌ಗೆ ಈ ವಿಷಯ ತಿಳಿಸಿದರು. ಕೂಡಲೇ ಪಿಯೆರ್ ಸಮಿತಿಗೆ ಪತ್ರ ಬರೆದು 'ಮೇರಿಯೂ ಈ ಕೆಲಸದಲ್ಲಿ ಪಾಲುದಾರಳಾಗಿದ್ದಾಳೆ. ಬಹುಮಾನ ಕೊಡುವುದಾದರೆ ಇಬ್ಬರಿಗೂ ಕೊಡಿ. ನಾನೊಬ್ಬನೇ ಈ ಬಹುಮಾನವನ್ನು ಸ್ವೀಕರಿಸುವುದಿಲ್ಲ' ಎಂದರು. ಆಗ ಸಮಿತಿ ವಿಧಿಯಿಲ್ಲದೆ, ಮನಸ್ಸಿಲ್ಲದೆ, ಮೇರಿ ಕ್ಯೂರಿಯ ಹೆಸರನ್ನು ಸೇರಿಸಿತು.

ಮುಂದೆ ಮೇರಿಯೊಬ್ಬರೇ ಪಿಚ್ ಬ್ಲೆಂಡ್ ವಸ್ತುವಿನಿಂದ ರೇಡಿಯಂ ಬೇರ್ಪಡಿಸುವ ಸಾಹಸಕ್ಕೆ ಕೈಹಾಕಿದರು. ಪಿಯೆರ್ ನೆರವು ನೀಡಿದರು. ಇದೊಂದು ಅತ್ಯಂತ ಅಪಾಯಕಾರಿ ಪ್ರಯೋಗ ಎಂದು ಆಲ್ಬರ್ಟ್ ಐನ್‌ಸ್ಟೈನ್ ಸಾರಿದ್ದಾರೆ. ನಾಲ್ಕು ವರ್ಷಗಳು ಹಿಡಿದ ಈ ಪ್ರಯೋಗದಲ್ಲಿ ಮೇರಿ ರೇಡಿಯಂ ಮೂಲವಸ್ತುವನ್ನು ಬೇರ್ಪಡಿಸಿ ಅದರ ಗುಣವಿಶೇಷಗಳನ್ನು ನಿಗದಿ ಮಾಡಿದರು. ಅದಕ್ಕಾಗಿ ಅವರಿಗೆ 1911ರ ಕೆಮಿಸ್ಟ್ರಿಯ ನೊಬೆಲ್ ಬಹುಮಾನ ಲಭಿಸಿತು.

ಮೇರಿಗಾಗಲಿ ಅಥವಾ ಪಿಯೆರ್‌ಗಾಗಲಿ ಹೆಸರು, ಕೀರ್ತಿಗಳು ಬೇಕಿರಲಿಲ್ಲ. ಮಿಕ್ಕವರು ಒತ್ತಾಯಿಸಿದರೂ ತಮ್ಮ ಸಂಶೋಧನೆ, ಅನ್ವೇಷಣೆಗಳಿಗೆ ಅವರು ಪೇಟೆಂಟ್ ಪಡೆಯಲಿಲ್ಲ.

ಮೇರಿ ಮತ್ತು ಪಿಯೆರ್‌ಗೆ ಇಬ್ಬರು ಹೆಣ್ಣುಮಕ್ಕಳು. ಐರಿನ್ ಮತ್ತು ಈವ್. ಐರಿನ್ ತಾಯಿಯ ಜಾಡನ್ನೇ ಹಿಡಿದು ತನ್ನ ಗಂಡನೊಡನೆ 1935ರ ಕೆಮಿಸ್ಟ್ರಿ ನೊಬೆಲ್ ಬಹುಮಾನ ಪಡೆದರು. ಈವ್ ಸಿನೆಮಾ, ಕಲೆ ಮುಂತಾದುವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು, ಹೆಸರಾಂತ ಕಲಾ ಲೇಖಕಿಯಾದರು. ಮಹಾತ್ಮ ಗಾಂಧಿ, ನೆಹರೂ ಮುಂತಾದವರನ್ನು ಭೇಟಿಯಾಗಿದ್ದ ಇವರು 2007ರಲ್ಲಿ ತಮ್ಮ 102ನೇ ವಯಸ್ಸಿನಲ್ಲಿ ನಿಧನರಾದರು. ಇವರ ಗಂಡ, ಲ ಬೌಸಿ 'ಯುನಿಸೆಫ್' ಸಂಸ್ಥೆಯ ಪರವಾಗಿ 1965ರ ಶಾಂತಿ ನೊಬೆಲ್ ಬಹುಮಾನ ಸ್ವೀಕರಿಸಿದರು.

ಏಪ್ರಿಲ್ 19, 1906. ದಂಪತಿ ಮತ್ತು ಮಕ್ಕಳು ತಮ್ಮ ಪ್ರವಾಸದಿಂದ ಹಿಂದಿರುಗಿದ್ದರು. ಬೆಳಿಗ್ಗೆ ಪಿಯೆರ್ ಕಾಲೇಜಿಗೆ ಹೊರಟಿದ್ದರು. ಮೇರಿಯನ್ನು ಕೇಳಿದರು,

'ನೀನೂ ಕಾಲೇಜಿಗೆ ಬರುತ್ತಿ ತಾನೇ?'

'ನನ್ನ ಮೇಲೆ ಒತ್ತಡ ಹೇರಬೇಡ. ನಾನು ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಬೇಕು.'

ಪಿಯೆರ್ ಸುಮ್ಮನೆ ಛತ್ರಿ ಹಿಡಿದು ಮನೆ ಬಿಟ್ಟರು.



ಮೇರಿ ಹಾಗೂ ಪಿಯೆರ್ ಸಮಾಧಿ

ಯಾರು ಊಹಿಸಿದ್ದಾರು? ಅದೇ ಅವರಿಬ್ಬರ ನಡುವಿನ ಕೊನೆಯ ಸಂಭಾಷಣೆ ಆಯಿತು.

ಪಿಯೆರ್ ಕಾಲೇಜಿನಲ್ಲಿ ಮೀಟಿಂಗ್ ಮುಗಿಸಿ ಮುದ್ರಣಾಲಯಕ್ಕೆ ಹೋದರು. ಅದು ತೆರೆದಿರಲಿಲ್ಲ. ಮತ್ತೆ ಕಾಲೇಜಿನತ್ತ ನಡೆದರು. ಸುರಿಮಳೆ. ಏನನ್ನೋ ಯೋಚಿಸುತ್ತಾ ರಸ್ತೆ ದಾಟಲು ಕಾಲಿಟ್ಟರು. ಅಲ್ಲಿ ಮಿಲಿಟರಿ ಉಡುಪುಗಳನ್ನು ಹೊತ್ತು ಬರುತ್ತಿದ್ದ ಕುದುರೆಗಾಡಿ ಬರುತ್ತಿತ್ತು. ಒಮ್ಮೆಗೆ ಅದು ಪಿಯೆರ್ ಅವರನ್ನು ಕೆಳಗೆ ಬೀಳಿಸಿತು. ಗಾಡಿಯ ಚಕ್ರ ತಲೆಯ ಮೇಲೆ ಹರಿದು ಪಿಯೆರ್ ಸ್ಥಳದಲ್ಲಿಯೇ ಮೃತಪಟ್ಟರು. ಮೇರಿಗೆ ಸುದ್ದಿ ತಲುಪಿದ್ದು ಅಂದು ಸಂಜೆ. ಗಂಡನ ಶವವನ್ನು ಮನೆಗೆ ತಂದಾಗ ಅದನ್ನು ಅಪ್ಪಿಕೊಂಡು ಕುಳಿತರು. ಮಿಕ್ಕವರು ಅವರನ್ನು ಬೇರ್ಪಡಿಸಬೇಕಾಯಿತು.

ಹೀಗೆ ಅವರ ದಾಂಪತ್ಯ ಜೀವನ ಹನ್ನೊಂದು ವರ್ಷಕ್ಕೆ ಮುಗಿದಿತ್ತು. ಮೂರು ದಿನಗಳ ನಂತರ ಮೇರಿ ಮತ್ತು ಅವರ ಅಕ್ಕ, ಪಿಯೆರ್ ಕೊನೆಯಲ್ಲಿ ಧರಿಸಿದ್ದ ಉಡುಪನ್ನು ತುಂಡು ತುಂಡು ಮಾಡಿ ಬೆಂಕಿಗೆ ಎಸೆದರು.

ಗಂಡನನ್ನು ಕಳೆದುಕೊಂಡ ಮೇರಿ ವಿಧವೆಯಾಗಿದ್ದು ಮಾತ್ರವಲ್ಲ, ಜೀವನವಿಡೀ ಮೌನಿಯಾದರು. ಮುಂಗೋಪ ಪ್ರಾರಂಭವಾಯಿತು. ಮನೆಯಲ್ಲಿ ನಗು ಮಾಯವಾಯಿತು. ಮಕ್ಕಳ ಬಗ್ಗೆಯೂ ಅವರು ನಿಗಾವಹಿಸಲಿಲ್ಲ. ಐರಿನ್ ಮತ್ತು ಈವ್ ಅವರನ್ನು ಪಿಯೆರ್‌ನ ತಂದೆ ಬೆಳೆಸಿದರು. ಅವರಿಗೆ ಪಾಠಗಳನ್ನು ಬೋಧಿಸಿದ್ದು ಅವರೇ. ಪದ್ಯ, ಸಾಹಿತ್ಯಗಳ ಬಗ್ಗೆ ಅವರಿಗೆ ಒಲವು ಮೂಡಿಸಿದ್ದೂ ಅವರೇ. ಅವರು ನಿಧನರಾದಾಗ ಹುಡುಗಿಯರು ಕಂಗೆಟ್ಟರು. ಈ ಕಾರಣಕ್ಕಾಗಿಯೋ ಏನೋ, ಮೇರಿ ಕ್ಯೂರಿಯ ಸಾವಿನ ನಂತರ ಅವರ ಜೀವನ ಚರಿತ್ರೆ ಬರೆದ ಈವ್, ತಮ್ಮ ತಾಯಿಯನ್ನು ಮೂರನೆಯ ವ್ಯಕ್ತಿಯಾಗಿ ಚಿತ್ರಿಸುತ್ತಾರೆ. ತಾಯಿ ಎಂಬ ಆತ್ಮೀಯತೆ ಅದರಲ್ಲಿ ಇಲ್ಲವೆಂಬುದು ಗಮನಾರ್ಹ. ಕೃತಿಯ ಹೆಸರು 'ಮೇರಿ ಕ್ಯೂರಿ' ಅಲ್ಲ, ಅದು 'ಮೇಡಂ ಕ್ಯೂರಿ'.

ಶೋಕತಪ್ತ ವಾತಾವರಣದಲ್ಲಿಯೂ ಮೇರಿ, ಹಿಂದೆ ತನ್ನ ಗಂಡನ ವಿದ್ಯಾರ್ಥಿಯಾಗಿದ್ದ ಪಾಲ್ ಲಾಂಜೆವಾನ್ ಎಂಬುವನಲ್ಲಿ ಅನುರಕ್ತಳಾಗಿದ್ದು ಸೋಜಿಗವೇ ಸರಿ. ಪ್ಯಾರಿಸ್ಸಿನಲ್ಲಿ ಇದು ಸಾಕಷ್ಟು ಗಲಭೆ ಉಂಟುಮಾಡಿತು. ಪಿಸ್ತೂಲ್ ದ್ವಂದ್ವಗಳಿಗೂ ಕಾರಣವಾಯಿತು.

ಮೇರಿಗೆ 1911ರಲ್ಲಿ ಎರಡನೆಯ ನೊಬೆಲ್ ಬಹುಮಾನ ಬಂದಾಗ ನೊಬೆಲ್ ಸಮಿತಿ ಅವರಲ್ಲಿ ವಿನಂತಿಸಿತು, 'ನಿಮ್ಮ ಮೇಲಿನ ಕಳಂಕದಿಂದ ಹೊರಬರುವವರೆಗೂ ನೀವು ಇಲ್ಲಿಗೆ ಬರಬೇಡಿ, ನಾವೇ ನಿಮ್ಮಲ್ಲಿಗೆ ಬಹುಮಾನವನ್ನು ಕಳಿಸುತ್ತೇವೆ'. ಮೇರಿ ಹಟ ಹಿಡಿದು ಹೋಗಿ ಬಹುಮಾನ ಸ್ವೀಕರಿಸಿದರು. ಆ ಮಾತು ಬೇರೆ. ಆದರೆ ಕೆಲವು ವರ್ಷಗಳ ನಂತರ ಚಲಿಸುವ ಮೋಡವಾಗಿ ಪ್ರಸಂಗ ತಣ್ಣಗಾಯಿತು.

ಮೇರಿ ತಮ್ಮ ಕೆಲಸವನ್ನಲ್ಲದೆ ತಮ್ಮ ಪತಿ ಬಿಟ್ಟುಹೋಗಿದ್ದ ಕೆಲಸಗಳನ್ನೂ ಮಾಡಿ ಮುಗಿಸಿದರು. ಪಿಯೆರ್ ಪುಸ್ತಕದ ಉಳಿದ ಭಾಗಗಳನ್ನು ಬರೆದು ಪ್ರಕಟಿಸಿದವರು ಇವರೇ. ಅಲ್ಲದೆ ಪಿಯೆರ್‌ಗೆ ಒಂದು ಕನಸಿತ್ತು; ರೇಡಿಯಂ ಸಂಶೋಧನೆಗೆ ಒಂದು ಪ್ರಯೋಗಾಲಯ ನಿರ್ಮಿಸಬೇಕು ಎನ್ನುವುದು. ಅದನ್ನು ನನಸಾಗಿಸಿದವರು ಮೇರಿಯೇ. ಅವರು ಕಟ್ಟಿದ ಸಂಸ್ಥೆ ಇಂದು 'ಇನ್‌ಸ್ಟಿಟ್ಯೂಟ್ ಕ್ಯೂರಿ' ಹೆಸರಿನಲ್ಲಿ ಪ್ರಖ್ಯಾತವಾಗಿ ನೂರು ವರ್ಷಗಳ ಸೇವೆ ಸಲ್ಲಿಸಿ ಇನ್ನೂ ಪ್ರಬಲವಾಗಿ ಮುಂದುವರೆಯುತ್ತಿದೆ.

ದಂಪತಿಗೆ 1995ರಲ್ಲಿ ಸರ್ಕಾರ ಫ್ರಾನ್ಸಿನ ಅತ್ಯಧಿಕ ಗೌರವವನ್ನು ಸಲ್ಲಿಸಿ ಅವರ ಭಗ್ನಾವಶೇಷಗಳನ್ನು 'ಲ ಪ್ಯಾಂಥಿಯಾನ್'ನಲ್ಲಿ ಇರಿಸಿದೆ.

ಪ್ರತಿಕ್ರಿಯಿಸಿ: feedback@sudha.co.in